**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 2161/2022**

ಚಾ.ಸಾ–02, ಪ್ರಾ.ಸಾ–2

| | | |
|---|---|---|
| ಹೆಸರು | : | ನಾಗಮ್ಮ |
| ಗಂಡನ ಹೆಸರು | : | ರಾಜೇಶ್ |
| ವಯಸ್ಸು | : | 35 |
| ವೃತ್ತಿ | : | ಖಾಸಗಿ ಕೆಲಸ |
| ವಾಸ | : | ನೆರಗ್ಯಾತನಹಳ್ಳಿ |

**ದಿನಾಂಕ 09.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ  ಎಪಿಪಿ ರವರಿಂದಃ**

ಚಾಸಾ 1 ನನ್ನ ತಾಯಿ. ಚಾಸಾ 3 ನನ್ನ ತಂದೆ. ನನಗೆ ಚಾಸಾ 4 ರಿಂದ 7 ಪರಿಚಯವಿದೆ.  ಆರೋಪಿತರ ಪರಿಚಯವಿದೆ.

ದಿಃ 24.04.2021 ರಲ್ಲಿ ಆರೋಪಿತರೆಲ್ಲಾ ಮರಿಸ್ವಾಮಿ ಮತ್ತು ನಾಗಮ್ಮ ಜೊತೆ ಜಗಳ ಮಾಡುತ್ತಿದ್ದದನ್ನು ನನ್ನ ತಾಯಿಯ ನಿಂತು ನೋಡುತ್ತಿದ್ದರು. ಆಗ ಆರೋಪಿತರು ಅವರ ಜೊತೆ ಜಗಳ ಮಾಡುವುದು ಬೇಡ ಚಾಸಾ 1 ರವರ ಜೊತೆ ಜಗಳ ಮಾಡಬೇಕು ಅಂತ ಚಾಸಾ 1 ರವರನ್ನು ಹಿಡಿದುಕೊಂಡು ಹೊಡೆದು ಅವರು ಹಾಕಿಕೊಂಡ ಬ್ಲೌಸ್ ನ್ನು ಹರಿದು ಅವರ ಬಲಗೈ ಗೆ ಏಟು ಮಾಡಿದರು. ನಾನು ಬಿಡಿಸಲು ಹೋದಾಗ 2 ನೇ ಆರೋಪಿ ನನ್ನ ಬಲಗೈನ ಬೆರಳನ್ನು ತಿರುಗಿಸಿದರು. ನನ್ನ ತಂದೆಯನ್ನು 4 ನೇ ಆರೋಪಿ ಕಾಲಿನಿಂದ ಒದ್ದು ಬೀಳಿಸಿದರು. ಆರೋಪಿತರೆಲ್ಲಾ ನಮಗೆ ತೊಂದರೆ ಕೊಟ್ಟು ನಿನ್ನ ತಮ್ಮನನ್ನು ಸಾಯಿಸಿದ ಹಾಗೆ ನಿಮ್ಮನ್ನು ಸಾಯಿಸುತ್ತೇವೆ ಎಂದು ಜೀವ ಬೆದರಿಕೆ ಹಾಕಿದರು. ಆಗ ಚಾಸಾ 4 ಮತ್ತು 5 ಬಂದು ಜಗಳ ಬಿಡಿಸಿದರು.

**ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯನ್ನು ಭಾಗಶಃ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

1 ನೇ ಆರೋಪಿ ಜಗಳಕ್ಕೆ ನಾನೇ ಕಾರಣ ಅಂತ ಚಾಸಾ 1 ರವರಿಗೆ ಅವಾಚ್ಯ ಶಬ್ದದಿಂದ ಬೈದರು ಎಂದರೆ ಸರಿ. 2 ನೇ ಆರೋಪಿ ಚಾಸಾ 1 ರವರ ತಲೆಕೂದಲನ್ನು ಹಿಡಿದು ಎಳೆದಾಡಿದರು ಎಂದರೆ ಸರಿ. ಆರೋಪಿ 3 ರಿಂದ 6 ನನಗೆ ಅವಾಚ್ಯ ಶಬ್ದದಿಂದ ಬೈದು ನನಗೆ ಅಕ್ರಮವಾಗಿ ತಡೆ ಹಿಡಿದರು ಎಂದರೆ ಸರಿ. 1 ನೇ ಆರೋಪಿ ಚಾಸಾ 1 ರವರ ಎದರೆಗೆ ಮತ್ತು ಕಾಲಿಗೆ ಒದ್ದರು ಎಂದರೆ ಸರಿ. ಆರೋಪಿ 5 ಮತ್ತು 6 ಕೈ ಯಿಂದ ಗುದ್ದಿದರು ಎಂದರೆ ಸರಿ. ಈ ವಿಚಾರವಾಗಿ ಪೊಲಿಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ  ಬಿ ಎಸ್ ಆರೋಪಿತರ ಪರ ವಕೀಲರಿಂದಃ**

ದಿಃ 24.04.2021 ರಂದು ಜಗಳವಾಗುತ್ತಿರುವಾಗ ನಾನು

ಹೋಗಿದ್ದೆ. ಆರೋಪಿತರು ಜಗಳವಾಡುತ್ತಿದ್ದ ನಾಗಮ್ಮ ಮತ್ತು ಮರಿಸ್ವಾಮಿ ನನ್ನ

ಸಂಬಂದಿಕರು ಎಂದರೆ ಸರಿ. ಆರೋಪಿತರು ಮತ್ತು ನಾಗಮ, ಮರಿಸ್ವಾಮಿ

ಜಗಳವಾಡಿ ಸುಮ್ಮನಾದರು ಎಂದರೆ ಸರಿಯಲ್ಲ. ನನ್ನ ತಮ್ಮ ಬೆಂಗಳೂರಿನಲ್ಲಿ

ತೀರಿಕೊಂಡಿದ್ದರು. ನನ್ನ ತಮ್ಮ ನೇಣು ಹಾಕಿಕಕೊಂಡು ತೀರಿಕೊಂಡಿರುತ್ತಾರೆ. ನನ್ನ

ತಮ್ಮ ತೀರಿಕೊಂಡ  ಬಗ್ಗೆ ನನ್ನ ತಾಯಿ ಬೇರೆಯವರ ಮೇಲೆ ದೂರು ನೀಡಿರುತ್ತಾರೆ

ಎಂದರೆ ಸರಿ. ನನ್ನ ತಮ್ಮ ತೀರಿಕೊಂಡಿದ್ದ ಕಾರಣಕ್ಕೂ ಆರೋಪಿತರಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ತೀರಿಕೊಂಡ ನನ್ನ ತಮ್ಮನಿಗೂ ಹಾಗೂ ರಮ್ಯ ಎಂಬ ಹುಡುಗಿಗೂ ಪ್ರೇಮ ಸಂಬಂದ ಇತ್ತು ಎಂದರೆ ಸರಿ. ರಮ್ಯ ರವರಿಗೆ ಜಮೀನು ಇಲ್ಲದ ಕಾರಣ ಆರೋಪಿತರ ಜಮೀನಿನಲ್ಲಿ ಹೂತು ಹಾಕಿದ್ದರು ಎಂದರೆ ಸರಿ. ರಮ್ಯ ತೀರಿಕೊಂಡ 1 ತಿಂಗಳ ನಂತರ ನನ್ನ ತಮ್ಮ ತೀರಿಕೊಂಡಿರುತ್ತಾರೆ ಎಂದರೆ ಸರಿ. ರಮ್ಯ ರವರನ್ನು ಆರೋಪಿತರ ಜಮೀನಿನಲ್ಲಿ ಹೂತು ಹಾಕಿದ್ದರಿಂದ ನಮ್ಮ ತಾಯಿಗೆ ಮತ್ತು ನಮಗೆ ಆರೋಪಿತರ ಮೇಲೆ ದ್ವೇಷ ಇತ್ತು ಎಂದರೆ ಸರಿಯಲ್ಲ. ಆರೋಪಿತರು ನನ್ನ ತಾಯಿಯ ಜೊತೆ ಜಗಳ ವಾಡದಿದ್ದರೂ ಸಹಿತ ಆರೋಪಿ ವಿರುದ್ದ ಸುಳ್ಳು ದೂರು ನೀಡಿರುತ್ತೇವೆಂದರೆ ಸರಿಯಲ್ಲ. ನಾನು ಈ ಮೇಲೆ ಹೇಳಿದಂತೆ ಆರೋಪಿ ವಿರುದ್ದ ಆರೋಪಿ ತರು  ಚಾಸಾ 1, ನನಗೆ ಹಾಗೂ ನನ್ನ ತಂದೆಗೆ ನಾನು ಹೇಳುವ ರೀತಿ ಹೊಡೆದರು ಎಂದರೆ ಸರಿಯಲ್ಲ. ಗಲಾಟೆ ಆದ ನಂತರ ನಾವು ಎಲ್ಲಿಯೂ ಹೋಗಿಲ್ಲ. ನನ್ನ  ತಾಯಿ ಯಾವಾಗ ದೂರು ಕೊಟ್ಟರೋ ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಯಾವುದೇ ಗಲಾಟೆ ನಡೆಯದಿದ್ದರೂ ಆರೋಪಿ ತರಿಗೆ ತೊಂದರೆ  ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ . ನುಡಿಯುತ್ತಿದ್ದೇನೆಂದರೆ ಸರಿಯಲ್ಲ

**<u>ಮರು ವಿಚಾರಣೆ ಇರುವುದಿಲ್ಲ.</u>**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದ. ತಿ.ನರಸೀಪುರ**